ಶ್ರೀ ಸಿದ್ದು ಸವದಿ:– ಸರ್ವೆಯರ್ ತೊಂದರೆ ಇಡೀ ರಾಜ್ಯದಲ್ಲಿದೆ ರೈತರ ಭೂಮಿ 3–4 ವರ್ಷದ್ದು ಸರ್ವೆಯಾಗಿಲ್ಲ. ಇದರಿಂದ ಭೂಮಿಯ ಖರೀದಿ ಆಗುವುದಿಲ್ಲ. ಅವರು ಹೇಳಿದ ಪ್ರಕಾರ ಎರಡು ವರ್ಷದ ನಂತರ ಈ ಬೆಲೆಗೆ ಅವರು ಕೊಡಲು ಒಪ್ಪುವುದಿಲ್ಲ. ದಯಮಾಡಿ ಸರ್ವೆಯವರನ್ನು ನೇಮಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಜೆ.ಕರುಣಾಕರ ರೆಡ್ಡಿ (ಕಂದಾಯ ಸಚಿವರು):– ಮಾನ್ಯ ಸದಸ್ಯರು ಏನು ಪ್ರಶ್ನೆಯನ್ನು ಕೇಳಿದ್ದಾರೆ ಈ ಮೊದಲು ಸಿಂಧನೂರಿನಿಂದ ನಮ್ಮ ನಾಡಗೌಡರು ಇದೇ ಪ್ರಶ್ನೆಯನ್ನು ಕೇಳಿದ್ದರು. ಇದು ಇಡೀ ರಾಜ್ಯದಲ್ಲಿ ಸಮಸ್ಯೆ ಇದೆ. ಆದ್ದರಿಂದ ಹೊಸದಾಗಿ 1600 ಸರ್ವೆಯರ್‌ಗಳನ್ನು ಭರ್ತಿ ಮಾಡಬೇಕೆಂದು ಸರ್ಕಾರ ತೀರ್ಮಾನ ಮಾಡಿದ್ದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಜೊತೆ ಮಾತನಾಡಿದ್ದೇವೆ. ಅವರು ಜುಲೈಯಲ್ಲಿ ಅರ್ಜಿಗಳನ್ನು ಕರೆದು ಸೆಪ್ಟಂಬರ್‌ನಲ್ಲಿ ಪರೀಕ್ಷೆ ನಡೆಸಿ ಆದಷ್ಟು ಬೇಗ ಅಕ್ಟೋಬರ್‌ನಲ್ಲಿ order ಮಾಡಿ ರಾಜ್ಯದಲ್ಲಿ ಎಲ್ಲೆಲ್ಲಿ ಸರ್ವೆಯರ್‌ಗಳ ಕೊರತೆ ಇದೆ ಅದೆಲ್ಲವನ್ನು ತುಂಬಿಸುತ್ತೇವೆ.

ಅತಿಕ್ರಮಣಕಾರರನ್ನು ತೆರವುಗೊಳಿಸುವುದು

5 (04) ಶ್ರೀ ಅಪ್ಪಾಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ (ಬಿಜಾಪುರ ನಗರ): ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ನಗರದಲ್ಲಿರುವ ಪ್ರಾಚ್ಯವಸ್ತು ಐತಿಹಾಸಿಕ ಸ್ಮಾರಕಗಳ ಪ್ರದೇಶಗಳಲ್ಲಿ ಅತಿಕ್ರಮಣಕಾರರು ಅತಿಕ್ರಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಯಾವ ಯಾವ ಸ್ಮಾರಕಗಳ ಪ್ರದೇಶದಲ್ಲಿ ಎಷ್ಟು ವರ್ಷಗಳಿಂದ ಅತಿಕ್ರಮಿಸಿದ್ದಾರೆ;

ಇ) ಯಾವ ಸ್ಥಳಗಳಲ್ಲಿ ಅತಿಕ್ರಮಣಕಾರರನ್ನು ತೆರವುಗೊಳಿಸಲಾಗಿದೆ ಹಾಗೂ ಉಳಿದ ಕಡೆ ತೆರವುಗೊಳಿಸದಿರಲು ಕಾರಣವೇನು;

ಈ) ಯಾವ ನಿಗಧಿತ ಸಮಯದೊಳಗೆ ಅತಿಕ್ರಮಣಕಾರರನ್ನು ತೆರವುಗೊಳಿಸಲಾಗುವುದು;

ಉ) ನ್ಯಾಯಾಲಯದಲ್ಲಿ ದಾವೆ ಹೂಡಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಇತ್ಯರ್ಥವಾಗಿರುವ ಹಾಗೂ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು; ಅವು ಯಾವ ಹಂತದಲ್ಲಿವೆ;

ಊ) ಈ ಪ್ರಾಚ್ಯವಸ್ತು ಐತಿಹಾಸಿಕ ಸ್ಮಾರಕಗಳನ್ನು ಅತಿಕ್ರಮಣಕಾರರು ಅತಿಕ್ರಮಿಸದಂತೆ ಹಾಗೂ ಸ್ಮಾರಕಗಳನ್ನು ರಕ್ಷಿಸಿ ಅಭಿವೃದ್ಧಿಪಡಿಸಲು ಸರ್ಕಾರವು ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಗೋವಿಂದ ಎಂ. ಕಾರಜೋಳ (ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು)

ಅ) ಇವುಗಳು ಭಾರತೀಯ ಪುರಾತತ್ವ ಸರ್ವೇಕ್ಷಣೆ ಇಲಾಖೆಯ ವ್ಯಾಪ್ತಿಗೆ ಬರುತ್ತದೆ.

ಆ) ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ಅಧೀನದಲ್ಲಿರುವ ಬಿಜಾಪುರದ 53 ಸಂರಕ್ಷಿತ ಸ್ಮಾರಕಗಳಲ್ಲಿ ಪೂರ್ವದಿಂದಲೂ ಅತಿಕ್ರಮಿಸಲಾಗಿದೆ. ವಿವರಗಳ ಪಟ್ಟಿಯನ್ನು ಅನುಬಂಧ–1ರಲ್ಲಿ ಲಗತ್ತಿಸಲಾಗಿದೆ.

ಇ) ಅತಿಕ್ರಮಣ ತೆರವುಗೊಳಿಸಲಾಗಿರುವ ಸ್ಮಾರಕಗಳ ಪಟ್ಟಿಯನ್ನು ಅನುಬಂಧ–2ರಲ್ಲಿ ಲಗತ್ತಿಸಲಾಗಿದೆ. ಉಳಿದ ಅತಿಕ್ರಮಣಕಾರರನ್ನು ತೆರವುಗೊಳಿಸುವ ಪ್ರಕ್ರಿಯೆ ಜಾರಿಯಲ್ಲಿದೆ.

ಈ) ಅತಿಕ್ರಮಣಕಾರರನ್ನು ತೆರವುಗೊಳಿಸುವ ಕಾಲಮಿತಿಯು ನ್ಯಾಯಾಲಯದ ತೀರ್ಪಿನ ಮೇರೆಗೆ ಅವಲಂಬಿಸಿರುತ್ತದೆ.

ಉ) ಅತಿಕ್ರಮಣಕಾರರ ಮೇಲೆ ನ್ಯಾಯಾಲಯದಲ್ಲಿ ಒಟ್ಟು 21 ಪ್ರಕರಣಗಳಲ್ಲಿ ದಾವೆಗಳನ್ನು ಹೂಡಲಾಗಿದೆ. ಈ ಎಲ್ಲಾ ಪ್ರಕರಣಗಳಲ್ಲಿ ನ್ಯಾಯಾಲಯದಿಂದ ಅಂತಿಮ ತಡೆಯಾಜ್ಞೆ ದೊರೆತಿಲ್ಲ ಹಾಗೂ ಪ್ರಕರಣಗಳು ಅಂತಿಮವಾಗಿ ಇತ್ಯರ್ಥವಾಗಿರುವುದಿಲ್ಲ.

ಊ) ಕೇಂದ್ರ ಸರ್ಕಾರದ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಅಧೀನದಲ್ಲಿರುವ ಐತಿಹಾಸಿಕ ಸ್ಮಾರಕಗಳ ಅತಿಕ್ರಮಣ ತಡೆಗಟ್ಟಲು ಸ್ಮಾರಕಗಳ ಸುತ್ತಲೂ ಕಾಂಪೌಂಡ್ ಗೋಡೆ, ಕಾವಲು ಸಿಬ್ಬಂದಿಗಳನ್ನು ಒದಗಿಸುವುದು ಹಾಗೂ ಸ್ಮಾರಕಗಳ ಮೇಲೆ ನಿರಂತರ ನಿಗಾ ಹಾಗೂ ಅವುಗಳ ಪರಿಸರವನ್ನು ಸಾಕಷ್ಟು ಅಭಿವೃದ್ಧಿಗೊಳಿಸಿದೆ ಮತ್ತು ಅವುಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲಾಗಿದೆ. ಪ್ರವಾಸಿಗರಿಗೆ ಅನುಕೂಲವಾಗುವ ದೃಷ್ಟಿಯಿಂದ ಸ್ಮಾರಕಗಳಿಗೆ ಹೋಗಲು ಹಾದಿಗಳನ್ನು ಕುಳಿತುಕೊಳ್ಳಲು ಆಸನಗಳನ್ನು, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ಮತ್ತು ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಸ್ಮಾರಕಗಳ ಕುರಿತು ಕಿರುಹೊತ್ತಿಗೆಗಳನ್ನು ಒದಗಿಸಲಾಗಿದೆ.

ಶ್ರೀ ಅಪ್ಪಾಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಮಾನ್ಯ ಸಚಿವರ ಗಮನಕ್ಕೆ

ತರಬಯಸುವುದೇನೆಂದರೆ, ಬಿಜಾಪುರ ಜಿಲ್ಲೆಯ ಅದರಲ್ಲೂ ಬಿಜಾಪುರ ನಗರದ ಐತಿಹಾಸಿಕ ಸ್ಮಾರಕಗಳು ಬಹಳ ದಿವಸಗಳಿಂದ ಅತಿಕ್ರಮಣವಾಗಿವೆ. ಅತಿಕ್ರಮಣವನ್ನು ತೆರವುಗೊಳಿಸಬೇಕೆಂದು ಆಗ್ರಹಿಸಿ ಹಲವಾರು ಹೋರಾಟಗಳು ಕೂಡಾ ನಡೆಯುತ್ತಿವೆ. ಇಂತಹ ಸಂದರ್ಭದಲ್ಲಿ ಇಡೀ ನಗರದ ಹಲವಾರು ಪ್ರೇಕ್ಷಣೀಯ ಸ್ಥಳಗಳು ಕೂಡಾ ಅತಿಕ್ರಮಣಕ್ಕೊಳಗಾಗಿವೆ. ಅತಿಕ್ರಮಣವನ್ನು ತೆರವುಗೊಳಿಸುವುದರ ಕುರಿತು ಈಗಾಗಲೇ ಕೆಲವರು ನ್ಯಾಯಾಲಯದ ಮೊರೆ ಹೋಗಿದ್ದಾರೆ ಎನ್ನುವ ಮಾಹಿತಿಯನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಇಷ್ಟಿದ್ದರೂ ಕೂಡ ದಿನೇ ದಿನೇ ಅತಿಕ್ರಮಣ ಕಾರ್ಯಗಳು ನಡೆಯುತ್ತಲೇ ಇವೆ. ನನ್ನ ವಿನಂತಿ ಏನೆಂದರೆ, ಈ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ಸಂಬಂಧಪಟ್ಟ ಪುರಾತತ್ವ ಇಲಾಖೆಗೆ ಹೆಚ್ಚಿನ ಶಕ್ತಿಯನ್ನು ಕೊಟ್ಟು, ಅವರಿಗೆ ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳು ಹೆಚ್ಚಿನ ನೆರವನ್ನು ನೀಡಿದರೆ, ಅತಿಕ್ರಮಣ ತೆರವುಗೊಳಿಸಲು ಮತ್ತು ಮುಂದೆ ಆಗುವುದನ್ನು ತಡೆಗಟ್ಟಲು ಸಹಕಾರಿಯಾಗುತ್ತದೆ. ಅಲ್ಲಿ ದಿನೇ ದಿನೇ ಅತಿಕ್ರಮಣವಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈ ಬಗ್ಗೆ ಸಂಬಂಧಪಟ್ಟವರ ಗಮನಕ್ಕೆ ಸಾಕಷ್ಟು ಸಲ ತಂದರೂ ಕೂಡ ಅದು ನಿಲ್ಲುತ್ತಿಲ್ಲ. ಅತಿಕ್ರಮಣವನ್ನು ತಡೆಯುವಂಥ ಕೆಲಸ ಆಗಬೇಕಾಗಿದೆ. ಇದರಿಂದ ಸರ್ಕಾರಕ್ಕೂ ಸಹಿತ ಹಾನಿಯಾಗುತ್ತದೆ. ಹಳೆಯ ಕೋಟೆಗಳು ನಮ್ಮಲ್ಲಿ ಸಾಕಷ್ಟು ಇರುವುದರಿಂದ, ಅಲ್ಲಿ ಸ್ಲಂಗಳ ನಿರ್ಮಾಣವಾಗುತ್ತಿದೆ. ಅವುಗಳನ್ನು ತೆರವುಗೊಳಿಸಲು ಸರ್ಕಾರಕ್ಕೂ ತೊಂದರೆಯಾಗುತ್ತದೆ ಮತ್ತು ಅವರಿಗೆ ಪುನರ್ವಸತಿ ಸಹ ಕಲ್ಪಿಸಬೇಕಾಗುತ್ತದೆ. ಅವು ಹಳೆಯ ಕಟ್ಟಡಗಳಾಗಿರುವುದರಿಂದ, ಅವುಗಳು ಬಿದ್ದು, ಅಪಾಯ ಸಂಭವಿಸಿರುವ ಸಂದರ್ಭ ಕೂಡಾ ಇದೆ. ಆದ್ದರಿಂದ, ಈಗಾಗಲೇ ಅತಿಕ್ರಮಣ ಮಾಡಿರುವವರ ಮನವೊಲಿಸಿ, ಅದನ್ನು ತೆರವುಗೊಳಿಸುವ ಕೆಲಸ ಮಾಡಬೇಕು. ಮುಂದೆ ಅತಿಕ್ರಮಣವಾಗದಂತೆ ಕಟ್ಟಿನಿಟ್ಟಿನ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಸಭಾಧ್ಯಕ್ಷರೇ, ಬಿಜಾಪುರದಲ್ಲಿರುವ ಸ್ಮಾರಕಗಳು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಅಧೀನದಲ್ಲಿ ಬರುತ್ತದೆ. ಅವರು ಯಾವ ಯಾವ ಸಂದರ್ಭದಲ್ಲಿ ಅತಿಕ್ರಮಣ ತೆರವುಗೊಳಿಸಲು ನಮ್ಮ ಸಹಾಯ ಮತ್ತು ಸಹಕಾರ ಕೇಳಿದ್ದಾರೋ, ಅಂತಹ ಸಂದರ್ಭಗಳಲ್ಲೆಲ್ಲಾ ಸಹಕಾರ ನೀಡಿದ್ದೇವೆ. ಈಗಾಗಲೇ ನಾಲ್ಕು ಪ್ರದೇಶಗಳಲ್ಲಿ ಅತಿಕ್ರಮಣ ತೆರವುಗೊಳಿಸುವಂತಹ ಕೆಲಸ ಆಗಿದೆ. ಸುಮಾರು

10,580 sq.mt. ಪ್ರದೇಶದ ಒತ್ತುವರಿಯನ್ನು ತೆರವುಗೊಳಿಸುವ ಕಾರ್ಯವಾಗಿದೆ. ಇನ್ನೂ ಅನೇಕ ಕಡೆ ತೆರವುಗೊಳಿಸುವ ಕಾರ್ಯ ಆಗಬೇಕಾಗಿದೆ. ಕೆಲವು ಕಡೆ ಕೋರ್ಟಿನಲ್ಲಿರುವುದರಿಂದ ಇನ್ನೂ ಆಗಿಲ್ಲ. ಇನ್ನು ಕೆಲವು ಕಡೆ ಅತಿಕ್ರಮಣ ತೆರವುಗೊಳಿಸಲು ಸಂಬಂಧಪಟ್ಟವರಿಗೆ ನೋಟೀಸನ್ನು ಈಗಾಗಲೇ ಜಾರಿಗೊಳಿಸಲಾಗಿದೆ. ಅವರು ಯಾವ ಸಂದರ್ಭದಲ್ಲಿ ತೆರವುಗೊಳಿಸಲು ಮುಂದಾಗುತ್ತಾರೋ, ರಾಜ್ಯ ಸರ್ಕಾರದಿಂದ ಮತ್ತು ಜಿಲ್ಲಾ ಆಡಳಿತದಿಂದ ಅವರಿಗೆ ಕೊಡಬೇಕಾದಂಥ ಎಲ್ಲಾ ರೀತಿಯ ನೆರವನ್ನು ನಾವು ಕೊಡುತ್ತೇವೆ. ಭಾರತೀಯ ಪುರಾತತ್ವ ಇಲಾಖೆಯವರು ತಮ್ಮ ಕಾರ್ಯದಲ್ಲಿ ನಮ್ಮ ಇಲಾಖೆಯವರು ಹಸ್ತಕ್ಷೇಪ ಮಾಡಲು ಬಿಡುವುದಿಲ್ಲ. ಅವರದೇ ಆದಂತಹ ನಿಯಮಾವಳಿಗಳ ಪ್ರಕಾರ ಅವರು ಕೆಲಸ ಮಾಡುತ್ತಿದ್ದಾರೆ. ಖಂಡಿತವಾಗಿಯೂ ಸರ್ಕಾರ ಅದರ ಕಡೆಗೆ ಗಮನ ಕೊಡುತ್ತದೆ. ಹೊಸದಾಗಿ ಅತಿಕ್ರಮಣವಾಗದಂತೆ ನೋಡಿಕೊಳ್ಳಬೇಕೆಂದು ಜಿಲ್ಲಾಡಳಿತಕ್ಕೆ ಸೂಚನೆಯನ್ನು ಕೊಡುತ್ತೇವೆ.

ಶ್ರೀ ಅಪ್ಪಾಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ:– ಮಾನ್ಯ ಸಚಿವರು ಹೇಳಿರುವ ಹಾಗೆ, ಈ ಕಾರ್ಯ ನನ್ನ ಗಮನಕ್ಕೂ ಕೂಡಾ ಬಂದಿದೆ. ಭಾರತೀಯ ಪುರಾತತ್ವ ಇಲಾಖೆಯ ಕಾರ್ಯದಲ್ಲಿ ನಾವು ಹಸ್ತಕ್ಷೇಪ ಮಾಡುವಂತಿಲ್ಲ ಎನ್ನುವ ಮಾಹಿತಿ ಇದ್ದರೂ, ಸ್ಮಾರಕಗಳ ರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ಸ್ಮಾರಕಗಳು ಇರುವುದರಿಂದಲೇ ಇದು ಪ್ರವಾಸಿ ತಾಣವಾಗಿದೆ. ಹಲವಾರು ವರ್ಷಗಳ ಹಿಂದೆಯೇ ಪ್ರವಾಸಿಗರಿಗೆ ಅಗತ್ಯ ಸೌಲಭ್ಯ ಕಲ್ಪಿಸಿಕೊಡಬೇಕಾಗಿತ್ತು. ಆದರೆ, ಆ ಕೆಲಸ ಆಗಿಲ್ಲ. ಆದರೂ ಕೂಡ ಪ್ರವಾಸಿಗರಿಗೆ ಹೋಗಿ ಬರಲು, ವಿಮಾನ ಯಾನ ಮತ್ತು ರೈಲ್ವೆ ಸೌಲಭ್ಯದ ಸಂಪರ್ಕ ಕಲ್ಪಿಸುವ ಕಡೆಗೆ ನಮ್ಮ ಸರ್ಕಾರ ಈಗಾಗಲೇ ಹೆಚ್ಚು ಒತ್ತು ನೀಡಿದೆ. ಇಂತಹ ಸಂದರ್ಭದಲ್ಲಿ ಸ್ಮಾರಕಗಳ ರಕ್ಷಣೆ ಮಾಡುವುದು ಅಗತ್ಯವಾಗಿದೆ. ಇರುವಂತಹ ಪ್ರದೇಶವನ್ನು ಅತಿಕ್ರಮಣದಿಂದ ತೆರವುಗೊಳಿಸಿ, ತಮ್ಮ ವಶಕ್ಕೆ ಪಡೆಯಬೇಕೆನ್ನುವ ಪ್ರಯತ್ನಕ್ಕೆ ಅನೇಕ ಬಾರಿ support ಸಿಗುತ್ತಿಲ್ಲ ಎನ್ನುವ ಮಾಹಿತಿಯನ್ನು ಅವರನ್ನು ಸಂಪರ್ಕಿಸಿದಾಗ ನನ್ನ ಗಮನಕ್ಕೆ ಬಂದಿತು. ಈ ಬಗ್ಗೆ ಮಾನ್ಯ ಸಚಿವರು ಕೇಂದ್ರ ಸರ್ಕಾರಕ್ಕೂ ಕೂಡಾ ಪತ್ರ ಬರೆದು ಹೆಚ್ಚಿನ ಶಕ್ತಿಯನ್ನು ತುಂಬಬೇಕೆಂದು ಕೋರುತ್ತೇನೆ. ಬಿಜಾಪುರದ ನಗರದಲ್ಲಿ ಅತಿಕ್ರಮಣ ತೆರವುಗೊಳಿಸುವುದು ಮಹತ್ವದ ಕಾರ್ಯವಾಗಿದೆ. ಈ ಸ್ಮಾರಕಗಳು ಇಲ್ಲದೇ ಇದ್ದರೆ, ಬಿಜಾಪುರಕ್ಕೆ ಹೆಚ್ಚಿನ ಮಹತ್ವವೇ ಬರುತ್ತಿರಲಿಲ್ಲ. ಗೋಳಗುಮ್ಮಟ ಮತ್ತು ಇನ್ನಿತರ ಸ್ಮಾರಕಗಳು ಇರುವುದರಿಂದಲೇ ಬಿಜಾಪುರ

ಜಿಲ್ಲೆಗೆ ಮತ್ತು ನಗರಕ್ಕೆ ಹೆಚ್ಚಿನ ಮಹತ್ವ ಬಂದಿದೆ. ಆದ್ದರಿಂದ, ಮಾನ್ಯ ಸಚಿವರು ಇಲಾಖೆಯವರನ್ನು ಮತ್ತು ಜಿಲ್ಲಾಧಿಕಾರಿಗಳ ಸಭೆ ಕರೆದು ಎಲ್ಲೆಲ್ಲಿ ಏನೇನು ಆಗಿದೆ ಎಂದು ಕೇಳಿ, ಆದಷ್ಟು ಬೇಗನೆ ಅತಿಕ್ರಮಣ ತೆರವುಗೊಳಿಸಬೇಕು. ಇರುವಂಥ ಸ್ಥಳವನ್ನು ಅತಿಕ್ರಮಣ ಮಾಡದಂತೆ ತಡೆಯುವಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸೂಚನೆಗಳನ್ನು ಕೊಡಬೇಕೆಂದು ಮತ್ತೊಮ್ಮೆ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:– ಸನ್ಮಾನ್ಯ ಅಧ್ಯಕ್ಷರೆ, ನಾನು ಬಿಜಾಪುರ ಜಿಲ್ಲಾಧಿಕಾರಿ ಮತ್ತು ಸಂಬಂಧಪಟ್ಟ ಎಲ್ಲಾ ಇಲಾಖಾಧಿಕಾರಿಗಳ ಸಭೆ ಕರೆದು ಅವರಿಗೆ ಯಾವ ರೀತಿ ನೆರವನ್ನು ನೀಡಬೇಕೋ ಅದನ್ನು ಖಂಡಿತವಾಗಿಯೂ ಕೊಡುತ್ತೇವೆ. ಸ್ಮಾರಕಗಳನ್ನು ಸಂರಕ್ಷಣೆ ಮಾಡಲು ರಾಜ್ಯ ಸರ್ಕಾರ ಬದ್ಧವಾಗಿದೆ.

ಪ್ರಶ್ನೆ ಸಂಖ್ಯೆ. 6(3)
(ಮಾನ್ಯ ಸದಸ್ಯರಾದ ಶ್ರೀ ಪಾಟೀಲ್ ಎ.ಎಸ್. ರವರು ಗೈರು ಹಾಜರಾಗಿದ್ದರು.)
ಪ್ರಶ್ನೆ ಸಂಖ್ಯೆ. 7(26)
(ಮಾನ್ಯ ಸದಸ್ಯರಾದ ಶ್ರೀ ರವಿಸುಬ್ರಹ್ಮಣ್ಯ ರವರು ಗೈರು ಹಾಜರಾಗಿದ್ದರು.)

ಪ್ರಶ್ನೆ ಸಂಖ್ಯೆ. 8(19):

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀಕಾಂತ್ ಕುಲಕರ್ಣಿಯವರು "ಕೆರೆ ತುಂಬಿಸುವ" ಕುರಿತಂತೆ ಕೇಳಲಾಗಿರುವ ಪ್ರಶ್ನೆಯು ಬೇರೆ ಇಲಾಖೆಗೆ ವರ್ಗಾವಣೆಯಾಗಿದೆ. ಕೆರೆಗೆ ನೀರು ತುಂಬಿಸುವ ಯೋಜನೆಯನ್ನು ಭಾರೀ ನೀರಾವರಿ ಇಲಾಖೆಯವರು ಜಾರಿಗೊಳಿಸುತ್ತಿದ್ದಾರೆ. ಆ ಇಲಾಖೆಗೆ ಈ ಪ್ರಶ್ನೆ ವರ್ಗಾವಣೆಯಾಗಿದೆ, ನಾಳೆ ಉತ್ತರವನ್ನು ಒದಗಿಸಿ ಕೊಡಲಾಗುವುದು.

ಅಧ್ಯಕ್ಷರು:– ಆಯಿತು. ಮಾನ್ಯ ಸದಸ್ಯರಿಗೆ ನಾಳೆ ಉತ್ತರವನ್ನು ಕೊಡುತ್ತೇನೆಂದು ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ):– ಮಾನ್ಯ ಅಧ್ಯಕ್ಷರೆ, ಇದರಲ್ಲಿ ಸ್ವಲ್ಪ confusion ಇದೆ. ನಾನು ಹಿಂದಿನ ಅಧಿವೇಶನದಲ್ಲಿ ಈ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆದಾಗ, Minor irrigation ಇಲಾಖೆಯ ಮುಖಾಂತರ ಕೆರೆಗೆ ನೀರು ತುಂಬಿಸುವ ವ್ಯವಸ್ಥೆ ಮಾಡಿಸಿಕೊಡುತ್ತೇನೆಂದು ಅವರು ಆಶ್ವಾಸನೆ ನೀಡಿದ್ದರು. ಸನಾಳ ಗ್ರಾಮದಿಂದ